ಇಮೋಜಿ ಭಾಷೆ



ಕರ್ಕಿ ಕೃಷ್ಣಮೂರ್ತಿ

# ಆ ಫೈನರ್ ಟಚ್!

ಈಗ ಬೇಕಿರುವುದು ತಾವೇ ಭಾವನೆಗಳನ್ನು ಸೂಕ್ತ ರೀತಿಯಲ್ಲಿ ಉದ್ದೀಪಿಸಿಕೊಳ್ಳಬಲ್ಲ, ಕಲ್ಪನೆಗಳನ್ನು ಸೃಷ್ಟಿಸಿಕೊಳ್ಳಬಲ್ಲ ಯಂತ್ರಗಳು. ಅವುಗಳೂ ಬಂದಮೇಲೆ ಏನಾಗಬಹುದು?

ಜಯಂತ ಕಾಯ್ಕಿಣಿಯವರ 'ಒಳಾಂಗಣ' ಅನ್ನುವ ಕಥೆಯಲ್ಲಿ – ನಗರದಲ್ಲಿ ನೌಕರಿಯಲ್ಲಿರುವ ಯುವಕನೊಬ್ಬ ರಜೆಯಲ್ಲಿ ಊರಿಗೆ ಬಂದಿರುತ್ತಾನೆ. ಆತ ತುಳಸಿಕಟ್ಟೆಯ ಎದುರು ನಿಂತು ಜೋರಾಗಿ ಎರಡೂ ಕೈಬೀಸಿ ಇಂಗ್ಲೀಷಿನಲ್ಲಿ ಒಬ್ಬನೇ ಮಾತನಾಡುವುದನ್ನು ನೋಡಿ ಅವನ ತಂದೆಗೆ ಎದೆಯೇ ಒಡೆದುಹೋಗುತ್ತದೆ. ಮಗನಿಗೆ ಖಂಡಿತ ಮಳ್ಳು ಹಿಡಿದಿದೆ, ಇದನ್ನು ಹೆಂಡತಿಗೆ ಹೇಗೆ ಹೇಳುವುದು ಅಥವಾ ಕರೆದು ತೋರಿಸುವುದೋ ಎಂಬ ತಬ್ಬಿಬ್ಬಿನಲ್ಲಿ ಕಂಗಾಲಾಗುತ್ತಾನೆ ಆತ. ಸುಮಾರು ಹೊತ್ತಿನ ನಂತರ, ಮಗ ತನ್ನ ಕಿವಿಯಲ್ಲಿ ಪುಟಾಣಿ ಗುಂಡಿಯೊಂದನ್ನು ಸಿಗಿಸಿಕೊಂಡು ದೂರವಾಣಿಯಲ್ಲಿ ಮಾತನಾಡುತ್ತಿದ್ದಾನೆಂಬುದು ಅರಿವಾಗಿ ಸಮಾಧಾನ ನೋವುಗಳೆರಡೂ ಆಗುತ್ತವೆ ಆ ತಂದೆಗೆ. ಈ ಕಥೆಯಲ್ಲಿಯ ಯುವಕನ ಪ್ರತಿರೂಪಗಳು ನಮಗಿಂದು ಎಲ್ಲೆಲ್ಲೂ ಕಾಣಸಿಗುತ್ತವೆ. ಅದರಲ್ಲಿ ಯಾವುದೇ ವಿಲಕ್ಷಣತೆಯೂ ತೋಚದಷ್ಟು ಸಹಜವಾಗಿ ನಾವವರನ್ನು ಸ್ವೀಕರಿಸಿಯೂ ಆಗಿದೆ.

ಮೊನ್ನೆ ಹೀಗೇ ಆಯಿತು. ಕುಮಟಾದ ಬಸ್ ನಿಲ್ದಾಣದಲ್ಲಿ ಬೇರೊಂದು ಗಾಡಿ ಹಿಡಿಯಲು ನಾನು ಮತ್ತು ನನ್ನ ಶ್ರೀಮತಿ ಕಾಯುತ್ತಿದ್ದೆವು. ಆ ಸಮಯದಲ್ಲಿ, ಇನ್‌ಶರ್ಟ್ ಮಾಡಿದ ಪೂರ್ಣ ತೋಳಿನ ಅಂಗಿ, ಕಾಲಲ್ಲಿ ಕಪ್ಪು ಶೂಸು ಧರಿಸಿದ, ಯಾವುದೋ ಕಾರ್ಪೊರೇಟ್ ಕಂಪನಿಯ ನೌಕರನಂತೆ ಕಾಣುವ ಮಧ್ಯವಯಸ್ಕ ವ್ಯಕ್ತಿಯೊಬ್ಬ ಒಬ್ಬನೇ ಮಾತನಾಡುತ್ತ ನಿಲ್ದಾಣದಲ್ಲಿ ಅತ್ತಿಂದಿತ್ತ ಓಡಾಡುತ್ತಲಿದ್ದ. ಇಂಗ್ಲೀಷು ಹಾಗೂ ಕನ್ನಡದಲ್ಲಿ ಸಂವಹಿಸುತ್ತ ಆತ, ನಡುನಡುವೆ ಮೈಕಿನಲ್ಲಿ ಬಸ್ ಮಾಹಿತಿಯ ಅನೌನ್ಸ್‌ಮೆಂಟ್ ಬಿತ್ತರವಾಗುವಾಗ ಧ್ವನಿ ಏರಿಸಿ ಸಂಭಾಷಣೆ ನಡೆಸುತ್ತಿದ್ದ. ಅಲ್ಲೆಲ್ಲೋ ಸೀಟಿನ ಮೇಲೆ ಕುಳಿತುಕೊಳ್ಳುವುದು, ನಡುವೆ ಎದ್ದು ಹೋಗಿ ಗೋಡೆಗೆ ಆತುಕೊಳ್ಳುವುದು, ಆಗಷ್ಟೇ ಬಂದು ನಿಂತ ಬಸ್ಸಿನ ಬೋರ್ಡು ನೋಡುವುದು ಇತ್ಯಾದಿ ಚಟುವಟಿಕೆಗಳ ನಡುವೆಯೂ ಅವ್ಯಾಹತವಾಗಿ ಮಾತನಾಡುತ್ತಿದ್ದ ಅವನನ್ನು ಜನ ಅತಿ ಸಹಜವೆಂಬಂತೆ ಗಮನಿಸುತ್ತ, ಕಡೆಗಣಿಸುತ್ತಲೂ ಇದ್ದರು.

'ನೀವೂ ಲಾಸ್ಟ್‌ಟೈಮ್ ಅದ್ಯಾವುದೋ ಆಫೀಸ್ ಕಾಲ್ ಎಂದು ಅರ್ಧ ಗಂಟೆ ಮಾತಾಡಿದಿರಲ್ಲ, ಆಗ ಹೀಗೇ ಕಾಣುತ್ತಿದ್ದಿರಿ' ಎನ್ನುತ್ತ ಕೆಣಕಿದಳು ನನ್ನ ಹೆಂಡತಿ. ತಿಂಗಳ ಹಿಂದೆ, ಆಕೆಯ ಸಂಬಂಧಿಕರ